**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು**
ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560 002
ದೂರವಾಣಿ: (080) 22215072

ಕರ್ನಾಟಕ ಸರ್ಕಾರ

# ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ನೀಡುವ ಶಿಷ್ಯವೇತನದ ಅರ್ಜಿ ನಮೂನೆ

**ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: 18.1.2016**

ಪಾಸ್‌ಪೋರ್ಟ್
ಸೈಜಿನ
ಭಾವಚಿತ್ರ

| | |
|---|---|
| 1. ಅಭ್ಯರ್ಥಿಯ ಪೂರ್ಣ ಹೆಸರು | |
| 2. ವಿಳಾಸ<br><br>ದೂರವಾಣಿ/ಮೊಬೈಲ್ | |
| 3. ತಂದೆ : ಪೋಷಕರ ಹೆಸರು: | |
| 4. ಹುಟ್ಟಿದ ದಿನಾಂಕ ಮತ್ತು ವರ್ಷ (ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸಬೇಕು) | |
| 5. ವಿದ್ಯಾರ್ಹತೆ | |
| 6. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಯಾವ ಗುಂಪಿಗೆ ಸೇರಿದವರು ನಮೂದಿಸಿ. (ಕಡ್ಡಾಯವಾಗಿ ದೃಢೀಕರಿಸಿದ 15–16ನೇ ಸಾಲಿನ ಪ್ರಮಾಣ ಪತ್ರ ಲಗತ್ತಿಸಬೇಕು) | |
| 7. ಈಗ ಶಿಷ್ಯವೇತನ ಪಡೆಯಲಿಚ್ಛಿಸುವ ಕಲಾಕ್ಷೇತ್ರ ಮತ್ತು ಪ್ರಕಾರ (ಸೂಚನೆಯಲ್ಲಿರುವ ಅಂಕಣ 1ನ್ನು ನೋಡುವುದು) | |
| 8. ಹೇಳಬಯಸುವ ಇತರೆ ವಿಷಯಗಳು | |

## ಅಭ್ಯರ್ಥಿಯ ಪ್ರಮಾಣ ಪತ್ರ

**ಮೇಲೆ ತಿಳಿಸಿದ ಎಲ್ಲಾ ವಿಷಯಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.**

ದಿನಾಂಕ :
ಸ್ಥಳ :

ಅಭ್ಯರ್ಥಿಯ ಸಹಿ

# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು

## ಶಿಷ್ಯವೇತನ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

1. **ಕಲಾಕ್ಷೇತ್ರ ಮತ್ತು ಕಲಾಪ್ರಕಾರಗಳ ವಿವರ**

| | **ಕಲಾಕ್ಷೇತ್ರ** | **ಕಲಾ ಪ್ರಕಾರ** |
|---|---|---|
| ಅ. | ಕರ್ನಾಟಕ ಸಂಗೀತ | ಹಾಡುಗಾರಿಕೆ, ಪಿಟೀಲು, ವೀಣೆ, ಕೊಳಲು, ಮೃದಂಗ, ಘಟಂ, ಖಂಜರ, ಡೋಲು, ನಾದಸ್ವರ ಮತ್ತು ಸಂಬಂಧಿತ ಇತರೆ ವಾದ್ಯಗಳು |
| ಆ. | ಹಿಂದುಸ್ತಾನಿ ಸಂಗೀತ | ಗಾಯನ, ತಬಲಾ, ಸಿತಾರ, ಶಹನಾಯಿ, ಕೊಳಲು, ಸಂತೂರ್, ಹಾರ್ಮೋನಿಯಂ ಮತ್ತು ಸಂಬಂಧಿತ ಇತರೆ ವಾದ್ಯಗಳು. |
| ಇ. | ನೃತ್ಯ | ಭರತನಾಟ್ಯ, ಕೂಚಿಪುಡಿ, ಕಥಕ್ |
| ಈ. | ಸುಗಮ ಸಂಗೀತ | |
| ಉ. | ಕಥಾಕೀರ್ತನ | |
| ಊ. | ಗಮಕ | |

2. ಅಭ್ಯರ್ಥಿಗಳ ವಯೋಮಿತಿ 15 ರಿಂದ 35 ವರ್ಷ ಒಳಗಿರಬೇಕು.
3. ಅಭ್ಯರ್ಥಿಯು ನಿಗದಿತ ಅರ್ಜಿ ನಮೂನೆಯಲ್ಲಿ ಕನ್ನಡದಲ್ಲಿ ಸ್ಪಷ್ಟವಾಗಿ ಮಾಹಿತಿಗಳನ್ನು ತುಂಬಿ **ಕೊನೆಯ ದಿನಾಂಕ: 15.1.2016** ರ ಒಳಗಾಗಿ ಅಕಾಡೆಮಿ ಕಾರ್ಯಾಲಯಕ್ಕೆ ತಲುಪುವಂತೆ ಕಳುಹಿಸಿಕೊಡಬೇಕು.
4. ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಫೋಟೋವನ್ನು ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಅಂಟಿಸಬೇಕು.
5. ಅಭ್ಯರ್ಥಿಗಳು ಜನ್ಮದಿನಾಂಕದ ಪ್ರಮಾಣಪತ್ರ ಹಾಗೂ ಜಾತಿ ಪ್ರಮಾಣಪತ್ರವನ್ನು ತಪ್ಪದೆ ಅರ್ಜಿಯೊಂದಿಗೆ ಲಗತ್ತಿಸಬೇಕು.
6. ಅರ್ಜಿಯೊಂದಿಗೆ ಶಿಷ್ಯವೇತನದ ಇತ್ತೀಚಿನ ಪಠ್ಯಕ್ರಮವನ್ನು ನೀಡಲಾಗಿದ್ದು, ಪಠ್ಯಕ್ರಮ ಹಾಗೂ ಸೂಚನಾ ಹಾಳೆಯನ್ನು ಅಭ್ಯರ್ಥಿಗಳು ತಮ್ಮ ಬಳಿಯೇ ಇಟ್ಟುಕೊಂಡು ಅರ್ಜಿಯನ್ನು ಮಾತ್ರ ತುಂಬಿ ಕಳುಹಿಸಿ ಕೊಡಬೇಕು.
7. ಶೃತಿ ಹಾಗೂ ತಬಲಾ ಪಕ್ಕವಾದ್ಯ ವ್ಯವಸ್ಥೆಯನ್ನು ಅಕಾಡೆಮಿ ವತಿಯಿಂದ ಮಾಡಲಾಗುವುದು.
8. ವಾದ್ಯ ಸಂಗೀತ ಹಾಗೂ ತಾಳವಾದ್ಯಗಳ ಸಂದರ್ಶನದಲ್ಲಿ ಹಾಜರಾಗುವ ಅಭ್ಯರ್ಥಿಗಳು ತಾವೇ ತಮಗೆ ಬೇಕಾದ ವಾದ್ಯಪರಿಕರಗಳನ್ನು ತರಬೇಕು.
9. ನೃತ್ಯದ ಅಭ್ಯರ್ಥಿಗಳು ಪ್ರದರ್ಶನ ಸಂದರ್ಭದಲ್ಲಿ ಕನಿಷ್ಠ ಮುಖಾಲಂಕಾರ ಹಾಗೂ ಅಭ್ಯಾಸವಸ್ತ್ರವನ್ನು ಧರಿಸಬೇಕು. ಅಭ್ಯರ್ಥಿಗಳು ಕ್ಯಾಸೆಟ್/ಸಿ.ಡಿ. ಹಾಕಿಕೊಂಡು ಪ್ರದರ್ಶನ ನೀಡಬಹುದಾಗಿದೆ. ಆದರೆ ಪ್ರತಿಯೊಂದು ಐಟಂನ್ನು ಬೇರೆ ಬೇರೆ ಕ್ಯಾಸೆಟ್‌ಗಳಲ್ಲಿ ತರಬೇಕಾಗುವುದು. ಅಭ್ಯರ್ಥಿಗಳು ಇಚ್ಛಿಸಿದಲ್ಲಿ ಭರತನಾಟ್ಯ, ಕೂಚಿಪುಡಿ ಪ್ರಕಾರದಲ್ಲಿ ಹಾಡುಗಾರಿಕೆ ಮತ್ತು ನಟುವಾಂಗ ಕಲಾವಿದರನ್ನು ಮತ್ತು ಕಥಕ್ ವಿಭಾಗದವರು ತಬಲಾ ಕಲಾವಿದರನ್ನು ಕರೆತರಬಹುದು.
10. ಸಮಯಕ್ಕೆ ಸರಿಯಾಗಿ ಅಭ್ಯರ್ಥಿಗಳು ಸಂದರ್ಶನ ಏರ್ಪಡಿಸಿದ ಸ್ಥಳದಲ್ಲಿ ಹಾಜರಿರಬೇಕು. ಮತ್ತು ಮುಂಚಿತವಾಗಿ ಹಾಜರಾತಿ ಪುಸ್ತಕದಲ್ಲಿ ಹೆಸರು ಬರೆದು ಸಹಿ ಮಾಡಬೇಕು.
11. ಸಂದರ್ಶನದಲ್ಲಿ ಭಾಗವಹಿಸಲು ಅಭ್ಯರ್ಥಿಗಳಿಗೆ ಸಾದಾ ಬಸ್ ಪ್ರಯಾಣವೆಚ್ಚ/ಸ್ಲೀಪರ್ ಕ್ಲಾಸ್ ರೈಲುವೆಚ್ಚ (ಟಿಕೇಟ್ ಕಡ್ಡಾಯವಾಗಿ ತೋರಿಸಬೇಕು) ಹಾಗೂ ಊಟೋಪಚಾರದ ವೆಚ್ಚ ರೂ.150–00 ಗಳನ್ನು ನೀಡಲಾಗುವುದು.
12. ಅಕಾಡೆಮಿ ಸಿದ್ಧಪಡಿಸಿದ ಪಟ್ಟಿಯಂತೆ ಅಭ್ಯರ್ಥಿಗಳ ಸಂದರ್ಶನ ನಡೆಸಲಾಗುವುದು.
13. ಶಿಷ್ಯವೇತನ ಆಯ್ಕೆಯ ವಿಷಯದಲ್ಲಿ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.
14. ಆಯ್ಕೆಯಾದ ಅಭ್ಯರ್ಥಿಗೆ ರೂ;20,000–00 ಗಳ ಶಿಷ್ಯವೇತನ ನೀಡಲಾಗುವುದು. ಇದು ಪ್ರಸ್ತುತ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

– – –

# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು

## ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಶಿಷ್ಯವೇತನ ನೀಡುವುದಕ್ಕಾಗಿ ರೂಪಿಸಿದ ಪಠ್ಯಕ್ರಮ

### ಕರ್ನಾಟಕ ಶಾಸ್ತ್ರೀಯ ಸಂಗೀತ

**ಹಾಡುಗಾರಿಕೆ**

1. ಸರಳೆ ವರಸೆ – 3
2. ಜಂಟಿ ಸ್ವರಗಳು – 3
3. ಅಲಂಕಾರಗಳು – 2
4. ಸ್ವರಜತಿಗಳು – 3
5. ಲಕ್ಷಣ ಗೀತೆಗಳು – 1
6. ದೇವರನಾಮ – 2
7. ವಚನ – 1
8. ಆದಿತಾಳ, ರೂಪಕ ತಾಳ, ಜಂಪೆ ತಾಳ – ಈ ತಾಳಗಳಲ್ಲಿ ಅಲಂಕಾರಗಳನ್ನು ಹಾಡುವುದು.

**ತಾಳವಾದ್ಯ**

ಆದಿ ತಾಳ, ರೂಪಕ ತಾಳ, ಜಂಪೆ ತಾಳ –ಈ ತಾಳಗಳನ್ನು 3 ಕಾಲದಲ್ಲಿ ಹಾಡಿ, ನುಡಿಸಿ ತೋರಿಸುವುದು.

### ಹಿಂದುಸ್ತಾನಿ ಸಂಗೀತ

**ಗಾಯನ**

1. ಸರಳೆ – 5 (3 ಲಯಗಳಲ್ಲಿ)
2. ಜಂಟಿ ಸ್ವರ – 2
3. ಅಲಂಕಾರ – 5
4. ಲಕ್ಷಣ ಗೀತೆ – 2
5. ಸ್ವರ ಗೀತೆ – 4
6. ದಾದರಾ, ಕೇಹರವಾ, ತ್ರಿತಾಲ, ಝುಪ್‌ತಾಲ್– ಈ ತಾಳಗಳ ಶಾಸ್ತ್ರೀಯ ಮಾಹಿತಿ ನೀಡಿ ಕೈಯಲ್ಲಿ ತಾಳವನ್ನು ಹಾಕಿಕೊಂಡು ಹಾಡಲು ಬರಬೇಕು.
7. ಭೂಪಾಲಿ, ಭೀಮಪಲಾಸ್, ಬಾಗೇಶ್ವರಿ, – ಈ ರಾಗಗಳ ವಿವರಣೆ ತಿಳಿದಿರಬೇಕು.
8. ವಚನ – 2
9. ದೇವರನಾಮ – 2

### ತಾಳವಾದ್ಯ ವಿಭಾಗ

ದಾದರಾ, ಕೆಹರವಾ, ತ್ರಿತಾಲ್, ಝುಪ್‌ತಾಲ – ಈ ತಾಳಗಳ ಶಾಸ್ತ್ರೀಯ ಮಾಹಿತಿ ನೀಡಿ ಕೈಯಲ್ಲಿ ತಾಳವನ್ನು ಹಾಕಿ ನುಡಿಸಿ ತೋರಿಸಬೇಕು.

ಕೊಳಲು, ಕ್ಲಾರಿಯೋನೆಟ್, ಸಿತಾರ್ ಮುಂತಾದ ಯಾವುದೇ ವಾದ್ಯಗಳಿಗೆ ಮೇಲಿನ ರಾಗಗಳನ್ನು ಅನುಸರಿಸುವುದು.

### ಭರತನಾಟ್ಯ

1. ಪಾರಿಭಾಷಿಕ ಶಬ್ದಗಳ ಜ್ಞಾನ – ಅಡವು ಮತ್ತು ವೈವಿಧ್ಯ, ಅಂಗಶುದ್ಧಿ.
2. ಜತಿ ಸ್ವರದಲ್ಲಿ ಬರುವ ಜತಿಗಳನ್ನು ಹೇಳಿ ತೋರಿಸುವುದು. ಆಲರಿಪುವನ್ನು ಹೇಳಿ ತೋರಿಸುವುದು.
3. ಒಂದು ಅಲರಿಪು, ಒಂದು ಜತಿಸ್ವರ, ಒಂದು ದೇವರನಾಮ.
4. ಮಾಡುವ ಬಂಧಗಳನ್ನು ತಾಳದೊಂದಿಗೆ ಹಾಡಿ ತೋರಿಸಬೇಕು.
5. ಅಸಂಯುತ ಹಸ್ತಗಳ ಪರಿಚಯ.
6. ಒಂದು ಕನ್ನಡ ಕೃತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು.

## ಕಥಕ್

1. ಪಾರಿಭಾಷಿಕ ಶಬ್ದಗಳ ಜ್ಞಾನ
   ನರ್ತನ ವಿಭಾಗಗಳು, ತೋಡ, ಟುಕಡಾ, ತಿಹಾಯಿ, ಪರನ್, ಭ್ರಮರಿ, ತೀನ್‌ತಾಲ್ ತಾಳಗಳ ವಿವರಗಳು, ಸಂಯುತ, ಅಸಂಯುತ ಹಸ್ತಗಳ ಪರಿಚಯ.
2. ತತ್‌ಕಾರ್ ಮೇಲೆ ಹೇಳಿದ ತೀನ್ ತಾಲ್‌ದಲ್ಲಿ
3. ಪಢಂತ್ ವಿವರ ಮತ್ತು ಪ್ರಯೋಗ (ತಾಳ ಹಾಕಿ ಹೇಳಬೇಕು)
4. ಆಮದ್, ತೋಡಾ, ಟುಕಡಾ ತೀನ್ ತಾಲ್‌ದಲ್ಲಿ, ಗತ್‌ನಿಕಾಸ್, ಗತಭಾವಗಳನ್ನು ತೀನ್‌ತಾಲದಲ್ಲಿ
5. ಒಂದು ಠುಮ್ರಿ, ಒಂದು ಗತಭಾವ, ಒಂದು ಕವಿತಾ.
6. ಮಾಡುವ ಬಂಧಗಳ ಕಾವ್ಯಾರ್ಥ ಮತ್ತು ಭಾವಾರ್ಥಗಳನ್ನು ತಿಳಿಸುವುದು.

## ಕೂಚಿಪುಡಿ

1. ಪಾರಿಭಾಷಿಕ ಶಬ್ದಗಳ ಜ್ಞಾನ
   ನರ್ತನ ವಿಭಾಗಗಳು, ಪಾದವಿನ್ಯಾಸ, ಅಂಗಶುದ್ಧಿ, ಅಡವು ಪೂರ್ವರಂಗವಿಧಿ
2 ಸಂಯುತ ಅಸಂಯುತ ಹಸ್ತಗಳ ಪರಿಚಯ.
3. ಐದು ಜತಿಗಳು, ರಂಗಪೂಜೆ, ಒಂದು ಶಬ್ದಂ
4. ಮಾಡುವ ಬಂಧಗಳನ್ನು ತಾಳದಲ್ಲಿ ಹಾಡಿ ತೋರಿಸಬೇಕು.
5. ಕೂಚಿಪುಡಿ ನೃತ್ಯದಲ್ಲಿ ವಾಚಿಕಾಭಿನಯದ ಪ್ರಾಮುಖ್ಯತೆಯ ವಿವರಗಳು.

## ಸುಗಮ ಸಂಗೀತ

1. ಶೃತಿ ಜ್ಞಾನ,ಲಯ ಜ್ಞಾನ ಇರಬೇಕು. ಗೀತೆಯ ಸಾಹಿತ್ಯ ಹಾಗೂ ರಚನಾಕಾರ ಬಗ್ಗೆ ತಿಳಿದಿರಬೇಕು.
2. ಧ್ವನಿ ಸಂಸ್ಕರಣೆಯ ಬಗ್ಗೆ ಸಾಮಾನ್ಯ ಜ್ಞಾನವಿರಬೇಕು.
3. ಕನ್ನಡ ವ್ಯಾಕರಣದ ಬಗ್ಗೆ ಸಾಮಾನ್ಯ ಜ್ಞಾನ(ಉದಾ:ಸ್ವರಗಳು, ವ್ಯಂಜನಗಳು, ಗುರು, ಲಘು, ಛಂದಸ್ಸು, ಪ್ರತಿ ಪದಾರ್ಥ, ಉಚ್ಚಾರಣೆ, ಭಾವ ಇತ್ಯಾದಿ ವಿವರಣೆ)
4 ಪ್ರಮುಖ ಸುಗಮ ಸಂಗೀತಗಾರರ ಮತ್ತು ಕವಿಗಳ ಬಗ್ಗೆ ತಿಳುವಳಿಕೆ ಇರಬೇಕು.
5 ಯಾರಾದರೂ ಇಬ್ಬರು ಕವಿಗಳ 2 ಭಾವಗೀತೆ, 2 ವಚನ, 2 ದಾಸರ ಕೀರ್ತನೆಗಳನ್ನು ಹಾಡಲು ಬರಬೇಕು.

## ಕಥಾಕೀರ್ತನ

1. ಶೃತಿ ಶುದ್ಧವಾಗಿ ಕೀರ್ತನೆಗಳನ್ನು ಹಾಡುವ ಅಭ್ಯಾಸವಿರಬೇಕು.
2. ಶುದ್ಧ ಸಾಹಿತ್ಯ ಹಾಗೂ ಸ್ಪಷ್ಟ ಉಚ್ಚಾರಣೆ, ಭಾವ ಮತ್ತು ಅರ್ಥಕ್ಕೆ ಹೆಚ್ಚು ಮಹತ್ವ
3. 2 ಸಂಸ್ಕೃತ ಶ್ಲೋಕಗಳನ್ನು ಕಲಿತಿರಬೇಕು.
4. ಮಹಾಭಾರತ, ಭಾಗವತ, ಹರಿಶ್ಚಂದ್ರನ ಕಾವ್ಯ, ಶಿವಪುರಾಣ – ಇವುಗಳಲ್ಲಿ ಒಂದೊಂದು ಪದ್ಯ ವನ್ನು ಬಾಯಿ ಪಾಠ ಮಾಡಿ ತಮಗೆ ಅಭ್ಯಾಸವಿರುವ ರಾಗದಲ್ಲಿ ಹಾಡುವುದು.
5. ಹರಿಕಥೆ,ಶಿವಕಥೆ ಮತ್ತು ಭಕ್ತಿ ಪಂಥಕ್ಕೆ ಸಂಬಂಧಿಸಿದ ಒಂದೊಂದು ಕಥೆಯನ್ನು ನಿರೂಪಿಸುವುದು.

## ಗಮಕ

ಕುಮಾರವ್ಯಾಸನ–ಭಾರತ, ರಾಘವಾಂಕನ–ಹರಿಶ್ಚಂದ್ರ ಕಾವ್ಯ, ಲಕ್ಷ್ಮೀಶನ–ಜೈಮಿನಿ ಭಾರತ, ಚಾಮರಸನ–ಪ್ರಭುಲಿಂಗ ಲೀಲೆ – ಈ ಪ್ರತಿ ಕಾವ್ಯಗಳಲ್ಲಿನ ಕನಿಷ್ಠ 3 ಪದ್ಯಗಳನ್ನು ಅಭ್ಯಾಸ ಮಾಡಿ ತಮಗೆ ತಿಳಿದಿರುವ ರಾಗದಲ್ಲಿ ರಾಗ, ರಸ, ಭಾವಕ್ಕೆ ಅನುಸಾರವಾಗಿ ವಾಚನ ಮಾಡುವುದು ಮತ್ತು ಅರ್ಥ ವಿವರಣೆ ನೀಡುವುದು.

❖ ❖ ❖